**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ನಡವಳಿಗಳು**

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಗೂಲಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಿರುವವರಿಗೆ ಅನುದಾನ ಬಿಡುಗಡೆ ಮಾಡುವ ಕುರಿತು

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ:44:ಸೇಸ್ಥಅ:2013 ದಿ:22.02.2014
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/33/ಯುಇಸಿ/2014, ದಿ:14.11.2014
3. ಸರ್ಕಾರದ ಆದೇಶ ಸಂಖ್ಯೆ:ಇಡಿ:85:ಹೆಚ್‌ಪಿಸಿ:2020 ದಿನಾಂಕ:19.11.2020

****

**ಪ್ರಸ್ತಾವನೆ:**

ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ದಿನಾಂಕ:10.04.2006ರಂದು 10 ವರ್ಷಗಳಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ದಿನಗೂಲಿ ನೌಕರರನ್ನು ಅವರು 60 ವರ್ಷಗಳ ವಯಸ್ಸು ಪೂರ್ಣವಾಗುವವರೆಗೂ ದಿನಗೂಲಿ ಆಧಾರದ ಮೇಲೆ ಮುಂದುವರಿಸಲು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಉಲ್ಲೇಖ (1)ರ ಸರ್ಕಾರದ ಅಧಿಸೂಚನೆಯನ್ವಯ ಈ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಗೂಲಿ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು 60 ವರ್ಷಗಳ ವಯಸ್ಸು ಪೂರ್ಣವಾಗುವವರೆಗೂ ದಿನಗೂಲಿ ಆಧಾರದ ಮೇಲೆ ಮುಂದುವರಿಸಲು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಉಲ್ಲೇಖ(3)ರ ಸರ್ಕಾರದ ಆದೇಶದಲ್ಲಿ 2020-21ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆ ಮಾಡಿರುವ ಅನುದಾನದಲ್ಲಿ ವೇತನ, ಇತರೆ ಕಛೇರಿ ವೆಚ್ಚ, ಗೌರವಧನ ಮತ್ತು ದಿನಗೂಲಿ/ಗುತ್ತಿಗೆ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಆರು ತಿಂಗಳುಗಳ ವೇತನ ಪಾವತಿಗೆ ಅನುದಾನವನ್ನು ಬಿಡುಗಡೆ ಮಾಡಲು ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳಿಗೆ ಆರ್ಥಿಕ ಪ್ರತ್ಯಾಯೋಜನೆಯನ್ನು ನೀಡಿ ಆದೇಶ ಹೊರಡಿಸಲಾಗಿರುತ್ತದೆ. ಸರ್ಕಾರದ ಆದೇಶದನ್ವಯ ಡಿಸೆಂಬರ್-2020ರಿಂದ ಫೆಬ್ರವರಿ-2021ರ ಮಾಹೆವರೆಗೆ ಅನುದಾನವನ್ನು ಬಿಡುಗಡೆ ಮಾಡಲು ಆದೇಶಿಸಲಾಗಿರುತ್ತದೆ.

ಪ್ರಸ್ತುತ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ 16 ಸರ್ಕಾರಿ ಪ್ರಥಮ ದರ್ಜೆ ಕಾಲೇಜು/ವಿದ್ಯಾರ್ಥಿ ನಿಲಯಗಳಲ್ಲಿ ಒಟ್ಟು 17 ದಿನಗೂಲಿ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದು, ಇವರಿಗೆ ನಿಯಮಾನುಸಾರ ಕ್ಲೇಮು ಮಾಡಬೇಕಾಗಿರುವ ವೇತನವನ್ನು ಪಾವತಿಸಲು ಅನುದಾನ ಬಿಡುಗಡೆ ಮಾಡಬೇಕಾಗಿರುತ್ತದೆ. 2020-21ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ:2202-03-103-2-01-034ರಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಸದರಿ ಸಿಬ್ಬಂದಿಗಳಗೆ ಡಿಸೆಂಬರ್-2020 ರಿಂದ ಫೆಬ್ರವರಿ-2021ರ ಮಾಹೆಯವರೆಗೆ ವೇತನ ಪಾವತಿಸಲು ರೂ.10,61,259/-ಅನುದಾನವನ್ನು ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರಿಗೆ ಬಿಡುಗಡೆ ಮಾಡಲು ಈ ಆದೇಶ;

**ಆದೇಶ ಸಂಖ್ಯೆ:ಕಾಶಿಇ/ಆಯವ್ಯಯ/ದಿ.ನೌ.ವೇ/08/2020-21, ಬೆಂಗಳೂರು, ದಿನಾಂಕ:13.02.2021**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರ ಸೇವೆಯನ್ನು ಅವರುಗಳು 60 ವರ್ಷಗಳ ವಯಸ್ಸು ಪೂರ್ಣವಾಗುವವರೆಗೆ ದಿನಗೂಲಿ ನೌಕರರಾಗಿ ಮುಂದುವರೆಸಿ ಉಲ್ಲೇಖ(1) ಮತ್ತು (2)ರಲ್ಲಿ ಆದೇಶಿಸಿರುವ ಹಿನ್ನಲೆಯಲ್ಲಿ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿನ 16 ಕಾಲೇಜು/ವಿದ್ಯಾರ್ಥಿನಿಲಯದ ಒಟ್ಟು 17 ಸಿಬ್ಬಂದಿಗಳಿಗೆ ಅವರ ಹೆಸರಿನ ಮುಂದೆ ನಮೂದಿಸಿರುವ ಮೊತ್ತ ಪಾವತಿಸಲು **ರೂ.10,61,259/-(ಹತ್ತು** ಲಕ್ಷದ ಅರವತ್ತೊಂದು ಸಾವಿರದ ಎರಡು ನೂರ ಐವತ್ತೊಂಭತ್ತು **ರೂಪಾಯಿಗಳು ಮಾತ್ರ) ಅನ್ನು** ಪಾವತಿಸುವ ಸಂಬಂಧ, 2020-21ನೇ ಸಾಲಿನಲ್ಲಿ

ಲೆಕ್ಕ ಶೀರ್ಷಿಕೆ:2202-03-103-2-01-034ರಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಕಾಲೇಜಿನ ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ ಅನುದಾನ ಬಿಡುಗಡೆ ಮಾಡಲು ಅನುಮತಿ ನೀಡಿ ಆದೇಶಿಸಲಾಗಿದೆ.

**(ಮಾನ್ಯ ಆಯುಕ್ತರಿಂದ ಇ-ಆಫೀಸ್‌ನಲ್ಲಿ ಟಿಪ್ಪಣಿ ಅನುಮೋದಿಸಲ್ಪಟ್ಟಿದೆ)**

ಕಾಲೇಜು ಶಿಕ್ಷಣ ನಿರ್ದೇಶಕರು

ಷರತ್ತುಗಳು :

1. ಬಿಡುಗಡೆಗೊಳಿಸಿರುವ ಅನುದಾನವನ್ನು ನಿಯಮಾನುಸಾರ ಪರಿಶೀಲಿಸಿ ಬಿಡುಗಡೆಗೊಳಿಸಿರುವ ಉದ್ದೇಶಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ನಿಯಮಗಳನ್ನು ಪಾಲಿಸಿ ಅದರನ್ವಯವೇ ಪಾವತಿಸುವುದು.
2. ಆದೇಶದ ಅನುಬಂಧದ ಕ್ರ. ಸಂಖ್ಯೆ:5 ಶ್ರೀ. ಡಿ. ನಾಗರಾಜು ಇವರಿಗೆ 01.07.2020 ರಿಂದ 06.07.2020ರ ವರೆಗೆ ವೇತನದ ಶೇಕಡ 50% ಜೀವನಧಾರ ಭತ್ಯೆಯನ್ನು ಪಾವತಿಸಲು 07.07.2020 ರಿಂದ 30.09.2020ರ ವರೆಗೆ ಪೂರ್ಣವಾಗಿ ಪಾವತಿಸಲು ಹಾಗೂ ಮನೆ ಬಾಡಿಗೆಗೆ ಸಂಬಂಧಿಸಿದಂತೆ "ಸಿ" ವರ್ಗೀಕರಣ ದರದಲ್ಲಿ(ಶೇಕಡ 8) ಪಾವತಿಸುವುದು.
3. ಸದರಿ ಅನುದಾನವನ್ನು ಕೆ-2 ತಂತ್ರಾಂಶದಲ್ಲಿ ಕ್ಲೇಮ್ ಮಾಡತಕ್ಕದ್ದು.
4. ಅನುದಾನ ಬಳಕೆಯಾದ ನಂತರ ಕಡ್ಡಾಯವಾಗಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

ಇವರಿಗೆ:

ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು:**

1. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಅಂತರ್ಜಾಲದಲ್ಲಿ ಅಳವಡಿಸಲು ಕೋರಿದೆ.
2. ಕಛೇರಿ ಪ್ರತಿ.

**ಆದೇಶ ಸಂಖ್ಯೆ:ಕಾಶಿಇ/ಆಯವ್ಯಯ/ದಿ.ನೌ.ವೇ/08/2020-21, ಬೆಂಗಳೂರು, ದಿನಾಂಕ:13.02.2021ಕ್ಕೆ ಅನುಬಂಧ**

| ಕ್ರ. ಸಂ | ಸಿಬ್ಬಂದಿಯ ಹೆಸರು | ಕಾಲೇಜಿನ ಹೆಸರು | ಮಾಹೆವಾರು ಪಾವತಿಸಬೇಕಾಗಿರುವ ಮೊತ್ತ | ಡಿಸೆಂಬರ್-2020 ರಿಂದ ಫೆಬ್ರವರಿ-2021ರ ಮಾಹೆ ವರೆಗೆ ಬಿಡುಗಡೆ ಮಾಡುತ್ತಿರುವ ಒಟ್ಟು ಅನುದಾನದ ಮೊತ್ತ |
|---|---|---|---|---|
| 1 | ಮೂರ್ತಿ.ವಿ.ಎಲ್. | ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು | 22393 | 67179 |
| 2 | ನಾಗರಾಜ.ಎಂ. | ಸರ್ಕಾರಿ ಆರ್.ಸಿ. ಕಾಲೇಜು, ಬೆಂಗಳೂರು | 22393 | 67179 |
| 3 | ಶಿವರಾಮಯ್ಯ. | ಸರ್ಕಾರಿ ಕಲಾ ಕಾಲೇಜು, ಬೆಂಗಳೂರು | 22393 | 67179 |
| 4 | ಸಿದ್ದರಾಮಯ್ಯ.ಟಿ. | | 22393 | 67179 |
| 5 | ನಾಗರಾಜ್.ಡಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚಿಂತಾಮಣಿ | 19945 | 59835 |
| 6 | ಬೆಟ್ಟಯ್ಯ.ಹೆಚ್ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾ | 19945 | 59835 |
| 7 | ಗಂಗಮ್ಮ. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ | 19945 | 59835 |
| 8 | ಜಯನರಸಿಂಹ ಮೂರ್ತಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ | 19945 | 59835 |
| 9 | ಓಬಳೇಶಪ್ಪ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ | 19945 | 59835 |
| 10 | ಶಿವಲಿಂಗಯ್ಯ.ಎಂ | ಮಹಾರಾಣಿ ಮಹಿಳಾ ಕಲಾ ಕಾಲೇಜು ಮೈಸೂರು | 21169 | 63507 |
| 11 | ಬಸಮ್ಮ | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ವಿದ್ಯಾರ್ಥಿನಿಲಯ, ಮೈಸೂರು | 21169 | 63507 |
| 12 | ನಾಗರಾಜೇಗೌಡ | ಸರ್ಕಾರಿ ಕಲಾ ಕಾಲೇಜು ಹಾಸನ | 19945 | 59835 |
| 13 | ಗಾಯಿತ್ರಿ ಎಂ.ಎಸ್ | ಸರ್ಕಾರಿ ಮಹಿಳಾ ಕಾಲೇಜು ಮಂಡ್ಯ | 19945 | 59835 |
| 14 | ಶಿವಾನಂದ.ಸಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭದ್ರಾವತಿ | 19945 | 59835 |
| 15 | ರಂಗಣ್ಣ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾನ್ವಿ | 19945 | 59835 |
| 16 | ಶಂಕರ ಅಡಿವೆಪ್ಪ | ಸರ್ಕಾರಿ ಕಾಲೇಜು ಕಲಬುರಗಿ | 21169 | 63507 |
| 17 | ಹಿರಗೆಪ್ಪ ರುಕ್ಕಪ್ಪಾ | | 21169 | 63507 |
| | | ಒಟ್ಟು ಮೊತ್ತ | 353753 | 1061259 |

(ಹತ್ತು ಲಕ್ಷದ ಅರವತ್ತೊಂದು ಸಾವಿರದ ಎರಡು ನೂರ ಐವತ್ತೊಂಭತ್ತು **ರೂಪಾಯಿಗಳು ಮಾತ್ರ**)

ಕಾಲೇಜು ಶಿಕ್ಷಣ ನಿರ್ದೇಶಕರು